ಕರ್ನಾಟಕ ವಿಧಾನ ಪರಿಷತ್

ಸದಸ್ಯರ ಹೆಸರು	:	ಶ್ರೀ ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1177
ಉತ್ತರಿಸಬೇಕಾದ ದಿನಾಂಕ	:	22.09.2021.
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿ ಗೋಹತ್ಯೆ ನಿಷೇಧ ಜಾರಿಯಲ್ಲಿದೆಯೆ; (ಇದ್ದಲ್ಲಿ ವಿವರ ನೀಡುವುದು)	ರಾಜ್ಯದಲ್ಲಿ ಗೋಹತ್ಯೆ ನಿಷೇಧ ಜಾರಿಯಲ್ಲಿರುತ್ತದೆ. ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2020ರ ಆದೇಶದ ಪ್ರತಿಯನ್ನು **ಅನುಬಂಧ –1** ರಲ್ಲಿ ನೀಡಲಾಗಿದೆ.
ಆ	ಗೋಹತ್ಯೆ ನಿಷೇಧ ಕಾಯ್ದೆಯನ್ನು ರಾಜ್ಯದಲ್ಲಿ ಇನ್ನೂ ಸಂಪೂರ್ಣವಾಗಿ ಅನುಷ್ಠಾನಗೊಳಿಸದಿರಲು ಕಾರಣವೇನು; (ವಿವರಗಳನ್ನು ನೀಡುವುದು)	ಗೋಹತ್ಯೆ ನಿಷೇಧ ಕಾಯ್ದೆ ರಾಜ್ಯದಲ್ಲಿ ದಿನಾಂಕ:15–02–2021 ರಿಂದಲೇ ಜಾರಿಯಲ್ಲಿರುತ್ತದೆ.
ಇ	ಈ ಕಾಯ್ದೆಯನ್ನು ದುರುಪಯೋಗ ಪಡಿಸಿಕೊಂಡು ಪೋಲೀಸ್ ಇಲಾಖೆ ಮತ್ತು ಪಶುವೈದ್ಯ ಇಲಾಖೆಯವರು ವ್ಯಾಪಕವಾದ ಭ್ರಷ್ಟಾಚಾರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಬಂದಿರುವುದಿಲ್ಲ.
ಈ	ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆಯನ್ನು ಉಲ್ಲಂಘಿಸಿದವರ ವಿರುದ್ಧ ಇದುವರೆಗೂ ದಾಖಲಿಸಲಾದ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)	**ಅನುಬಂಧ –2** ರಲ್ಲಿ ನೀಡಲಾಗಿದೆ.

ಉ	ಗೋಹತ್ಯೆ ನಿಷೇಧ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸದೇ ಅನುಷ್ಠಾನಗೊಳಿಸದೆ ಇರುವ ಕೈಗೊಂಡ ಕ್ರಮಗಳೇನು? (ವಿವರಗಳನ್ನು ನೀಡುವುದು.)	ಗೋಹತ್ಯೆ ನಿಷೇಧ ಕಾಯ್ದೆ ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಗೊಂಡಿರುತ್ತದೆ.

ಪಸಂಮೀ ಇ–249 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು,

ಅನುಬಂಧ-1
ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಾ|| ವೈ.ಎ. ನಾರಾಯಣಸ್ವಾಮಿಯವರ (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರ.ಸಂ:1177ಕ್ಕೆ ಅನುಬಂಧ

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ - ೪ಎ Part –IV A	ಬೆಂಗಳೂರು, ಸೋಮವಾರ, ೧೫, ಫೆಬ್ರವರಿ, ೨೦೨೧ (ಮಾಘ, ೨೬, ಶಕವರ್ಷ, ೧೯೪೨) BENGALURU, MONDAY, 15, FEBRUARY, 2021 (Magha, 26, SHAKAVARSHA, 1942)	ನಂ. ೧೮೮ No. 188

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 86 ಶಾಸನ 2020, ದಿನಾಂಕ: 15.02.2021

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020 ಇದಕ್ಕೆ 2021ರ ಫೆಬ್ರವರಿ ತಿಂಗಳ 12 ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 01 ಎಂಬುದಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 01

(2021 ರ ಫೆಬ್ರವರಿ ತಿಂಗಳ 15 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2020

(2021 ರ ಫೆಬ್ರವರಿ ತಿಂಗಳ 12 ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ಜಾನುವಾರು ಹತ್ಯೆ ಪ್ರತಿಬಂಧಿಸವುದಕ್ಕಾಗಿ ಮತ್ತು ಸಂರಕ್ಷಣೆಗಾಗಿ ಸಮಗ್ರ ಶಾಸನವನ್ನು ಉಪಬಂಧಿಸುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಜಾನುವಾರು ಹತ್ಯೆ ಪ್ರತಿಬಂಧಿಸವುದಕ್ಕಾಗಿ ಮತ್ತು ಸಂರಕ್ಷಣೆಗಾಗಿ ಸಮಗ್ರ ಶಾಸನವನ್ನು ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಗೋಮಾಂಸ" ಎಂದರೆ ಯಾವುದೇ ರೂಪದಲ್ಲಿನ ಜಾನುವಾರು ಮಾಂಸ;

(2) "ಜಾನುವಾರು" ಎಂದರೆ ಎಲ್ಲಾ ವಯಸ್ಸಿನ ಆಕಳು, ಆಕಳ ಕರು ಮತ್ತು ಗೂಳಿ, ಎತ್ತು ಮತ್ತು ಹದಿಮೂರು ವರ್ಷದೊಳಗಿನ ಎಮ್ಮೆ ಅಥವಾ ಕೋಣ;

(3) "ಸಕ್ಷಮ ಪ್ರಾಧಿಕಾರಿ" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ನೇಮಿಸಿದ ಸಕ್ಷಮ ಪ್ರಾಧಿಕಾರಿ;

(4) "ಗೋ ಶಾಲೆ" ಎಂದರೆ ರಾಜ್ಯ ಅಥವಾ ಕೇಂದ್ರ ಅಧಿನಿಯಮದ ಅಡಿಯಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯೊಂದಿಗೆ ಹಾಗೆ ನೋಂದಾಯಿಸಿದ ಜಾನುವಾರು ರಕ್ಷಣೆ ಮತ್ತು ಸಂರಕ್ಷಣೆಗಾಗಿ ಸ್ಥಾಪಿಸಿದ ಆಸರೆದಾಣ;

(5) "ಅಧಿಸೂಚನೆ" ಎಂದರೆ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(6) "ಆವರಣಗಳು" ಎಂದರೆ ಮತ್ತು ಯಾವುದೇ ಆವರಣಗಳು, ನೌಕೆ ಅಥವಾ ವಾಹನವನ್ನು ಒಳಗೊಳ್ಳುವುದು;

(7) "ನಿಯಮಿಸಿದ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದದು; ಮತ್ತು

(8) "ಜಾನುವಾರು ಹತ್ಯೆ" ಎಂದರೆ ಯಾವುದೇ ವಿಧಾನದಿಂದ ಕೊಲ್ಲುವುದು ಮತ್ತು ಸಾಮಾನ್ಯವಾಗಿ ಸಾವಿಗೆ ಕಾರಣವಾಗುವ ದೈಹಿಕ ಹಾನಿಯ ಊನಗೊಳಿಸುವಿಕೆ ಮತ್ತು ಗಾಯಗೊಳಿಸುವಿಕೆ.

3. ಸಕ್ಷಮ ಪ್ರಾಧಿಕಾರಿಯ ನೇಮಕ.- ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಕಂದಾಯ ತಾಲ್ಲೂಕಿನ ತಹಶೀಲ್ದಾರ್ ಅಥವಾ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಪಶು ವೈದ್ಯಾಧಿಕಾರಿ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯನ್ನು, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಬಹುದಾದ ಅಂಥ ಸ್ಥಳೀಯ ಪ್ರದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಯಾಗಿ ನೇಮಿಸಬಹುದು.

4. ಜಾನುವಾರು ಹತ್ಯೆಯ ನಿಷೇಧ.- ಯಾವುದೇ ಕಾನೂನು, ಪದ್ಧತಿ ಅಥವಾ ಬಳಕೆಗೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಯಾವೊಬ್ಬ ವ್ಯಕ್ತಿಯೂ ಜಾನುವಾರು ಹತ್ಯೆ ನಡೆಸತಕ್ಕದ್ದಲ್ಲ ಅಥವಾ ಜಾನುವಾರು ಹತ್ಯೆ ನಡೆಸುವಂತೆ ಮಾಡತಕ್ಕದ್ದಲ್ಲ ಅಥವಾ ಜಾನುವಾರು ಹತ್ಯೆಗಾಗಿ ಕೊಡತಕ್ಕದ್ದಲ್ಲ ಅಥವಾ ಕೊಡುವಂತೆ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ಯಾವುದೇ ಜಾನುವಾರನ್ನು ಉದ್ದೇಶಪೂರ್ವಕವಾಗಿ ಕೊಲ್ಲತಕ್ಕದ್ದಲ್ಲ ಅಥವಾ ಕೊಲ್ಲಲು ಕೊಡತಕ್ಕದ್ದಲ್ಲ ಅಥವಾ ಕೊಡುವಂತೆ ಮಾಡತಕ್ಕದ್ದಲ್ಲ.

5. ಜಾನುವಾರು ಸಾಗಾಣಿಕೆಯ ಮೇಲೆ ನಿರ್ಬಂಧ.- ಯಾವೊಬ್ಬ ವ್ಯಕ್ತಿಯು ಯಾವುದೇ ಜಾನುವಾರನ್ನು ರಾಜ್ಯದೊಳಗಿನ ಯಾವುದೇ ಸ್ಥಳದಿಂದ ರಾಜ್ಯದೊಳಗಿನ ಯಾವುದೇ ಇತರ ಸ್ಥಳಕ್ಕೆ ಜಾನುವಾರು ಹತ್ಯೆಗಾಗಿ ಸಾಗಾಣಿಕೆ ಮಾಡತಕ್ಕದ್ದಲ್ಲ ಅಥವಾ ಸಾಗಾಣಿಕೆಗಾಗಿ ಕೊಡತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಸಾಗಿಸುವಂತೆ ಮಾಡತಕ್ಕದ್ದಲ್ಲ:

ಪರಂತು ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ನಿಯಮಿಸಿದ ವಿಧಾನದಲ್ಲಿ ನಂಬಿಕಸ್ಥ ಕೃಷಿ ಮತ್ತು ಪಶು ಸಂಗೋಪನೆಯ ಉದ್ದೇಶಕ್ಕಾಗಿ ಯಾವುದೇ ಜಾನುವಾರು ಸಾಗಾಣಿಕೆಯನ್ನು ಅಪರಾಧವೆಂದು ಅರ್ಥೈಸತಕ್ಕದ್ದಲ್ಲ.

6. ರಾಜ್ಯದ ಹೊರಗೆ ಜಾನುವಾರು ಸಾಗಾಣಿಕೆಯ ಮೇಲೆ ನಿರ್ಬಂಧ.- (1) ಯಾವುದೇ ಜಾನುವಾರುಗಳನ್ನು ರಾಜ್ಯದೊಳಗಿನ ಯಾವುದೇ ಸ್ಥಳದಿಂದ ರಾಜ್ಯದ ಹೊರಗೆ ಜಾನುವಾರು ಹತ್ಯೆ ಉದ್ದೇಶಕ್ಕಾಗಿ ಸಾಗಾಣಿಕೆ ಮಾಡತಕ್ಕದ್ದಲ್ಲ ಅಥವಾ ಸಾಗಾಣಿಕೆಗಾಗಿ ಕೊಡತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಸಾಗಿಸುವಂತೆ ಮಾಡತಕ್ಕದ್ದಲ್ಲ:

ಪರಂತು ಸಕ್ಷಮ ಪ್ರಾಧಿಕಾರಿಯು ನಂಬಿಕಸ್ಥ ಕೃಷಿ ಅಥವಾ ಪಶುಸಂಗೋಪನೆ ಉದ್ದೇಶಕ್ಕಾಗಿ ಜಾನುವಾರು ಸಾಗಾಣಿಕೆಗೆ ಪರವಾನಗಿಯನ್ನು (permit) ಹೊರಡಿಸಬಹುದು:

ಮತ್ತು ಪರಂತು ಪಶುಗಳಿಗೆ ಕ್ರೌರ್ಯ ತಡೆ ಅಧಿನಿಯಮ, 1960ರ (1960ರ ಕೇಂದ್ರ ಅಧಿನಿಯಮ 59) ಅಡಿಯಲ್ಲಿ ಕೇಂದ್ರ ಸರ್ಕಾರವು ಜಾನುವಾರು ಸಾಗಾಣಿಕೆಯನ್ನು ನಿರ್ವಹಿಸುವ ನಿಯಮಗಳಲ್ಲಿ ನಿಯಮಿಸಿದ ವಿಧಾನದಲ್ಲಿ ಜಾನುವಾರುಗಳನ್ನು ಸಾಗಾಣಿಕೆ ಮಾಡತಕ್ಕದ್ದು.

(2) (1)ನೇ ಪ್ರಕರಣದಲ್ಲಿ ಹೊರಡಿಸಿದ ಪರವಾನಗಿಯು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಹಾಗೂ ಅಂಥ ಶುಲ್ಕ ಪಾವತಿಗೊಳಪಟ್ಟು ಇರತಕ್ಕದ್ದು.

7. ಜಾನುವಾರುಹತ್ಯೆಗಾಗಿ ಜಾನುವಾರು ಮಾರಾಟ, ಖರೀದಿ ಅಥವಾ ವಿಕ್ರಯದ ನಿಷೇಧ.- ಯಾರೇ ವ್ಯಕ್ತಿಯು, ಹತ್ಯೆಗಾಗಿ ಅಥವಾ ಅಂಥ ಜಾನುವಾರನ್ನು ಹತ್ಯೆ ಮಾಡಲಾಗುತ್ತದೆ ಎಂದು ಗೊತ್ತಿದ್ದು ಅಥವಾ ಹಾಗೆ ನಂಬಲು ಕಾರಣವಿದ್ದಲ್ಲಿ, ಅಂಥ ಜಾನುವಾರನ್ನು ಖರೀದಿಸತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವಿಕ್ರಯ ಮಾಡತಕ್ಕದ್ದಲ್ಲ ಅಥವಾ ಖರೀದಿಸಲು, ಮಾರಾಟ ಮಾಡಲು ಅಥವಾ ಅನ್ಯಥಾ ವಿಕ್ರಯಿಸಲು ಆಹ್ವಾನಿಸತಕ್ಕದ್ದಲ್ಲ ಅಥವಾ ಖರೀದಿಸುವಂತೆ, ಮಾರಾಟ ಮಾಡುವಂತೆ ಅಥವಾ ಅನ್ಯಥಾ ವಿಕ್ರಯಿಸುವಂತ ಮಾಡತಕ್ಕದ್ದಲ್ಲ.

8. ಶೋಧಿಸುವ ಅಥವಾ ಜಪ್ತಿ ಮಾಡುವ ಅಧಿಕಾರ.- (1) ಸಬ್-ಇನ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆ ಇರದ ಒಬ್ಬ ಪೊಲೀಸ್ ಅಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಅಪರಾಧ ಎಸಗಲಾಗಿದೆ ಎಂದು ನಂಬಲು ಕಾರಣವಿದ್ದಲ್ಲಿ, ತನಿಖೆ ಮಾಡುವ ಮತ್ತು ಅಂಥ ಜಾನುವಾರನ್ನು ಹಾಗೂ ಅಂಥ ಅಪರಾಧವನ್ನು ಎಸಗಲು ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಆವರಣಗಳನ್ನು ಮತ್ತು ಸಾಮಗ್ರಿಗಳನ್ನು ಜಪ್ತಿ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಅಂಥ ಆವರಣಗಳ ಅಧಿಭೋಗ ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಸಕ್ಷಮ ಪ್ರಾಧಿಕಾರಿಗೆ ಅಥವಾ ಸಬ್-ಇನ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆ ಇರದ ಅಧಿಕಾರಿಗೆ, ಮೇಲೆ ಹೇಳಿದ ಉದ್ದೇಶಕ್ಕಾಗಿ ಅವಶ್ಯವಿರಬಹುದಾದಂತ ಆವರಣಗಳ ಅಂಥ ಪ್ರವೇಶಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಹಾಗೂ ಆತನಿಗೆ ಗೊತ್ತಿರುವಷ್ಟರಮಟ್ಟಿಗೆ ಮತ್ತು ನಂಬುವಷ್ಟರಮಟ್ಟಿಗೆ, ಸಬ್-ಇನ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆ ಇರದ ಅಧಿಕಾರಿಯು ಅಥವಾ ಸಕ್ಷಮ ಪ್ರಾಧಿಕಾರಿಯು ಆತನಿಗೆ ಕೇಳುವ ಯಾವುವೇ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಜಪ್ತಿ ಮಾಡಿದ ನಂತರ, ಮುಟ್ಟುಗೋಲಿಗಾಗಿ ಉಪ-ವಿಭಾಗೀಯ ದಂಡಾಧಿಕಾರಿಗಳ ಮುಂದೆ ಅನುಚಿತ ವಿಳಂಬವಿಲ್ಲದೆ ಅಂಥ ಜಪ್ತಿ ಕುರಿತು ಆತನು ವರದಿ ಮಾಡತಕ್ಕದ್ದು.

(4) ವರದಿಯನ್ನು ಸ್ವೀಕರಿಸಿದ ನಂತರ, ಅಪರಾಧ ಎಸಗುವಲ್ಲಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಆವರಣಗಳಿಗೆ ಮತ್ತು ಸಾಮಗ್ರಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು, ಉಪ-ವಿಭಾಗೀಯ ದಂಡಾಧಿಕಾರಿಗಳು, ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಎಸಗಲಾಗಿದೆ ಅಥವಾ ಎಸಗಲು ಉದ್ದೇಶಿಸಲಾಗಿತ್ತೆಂಬುದನ್ನು ಮನವರಿಕೆ ಮಾಡಿಕೊಂಡು, ಆರೋಪಿಸಲಾದ ಅಪರಾಧದ ಸಂಬಂಧದಲ್ಲಿ ಹೂಡಿದ ಕ್ರಿಮಿನಲ್ ವ್ಯವಹರಣೆಗಳ ಇತ್ಯರ್ಥದಲ್ಲಿರುವ ವಿಲೆಯನ್ನು ಅವರು ಅಂದಾಜಿಸಿದ ಮೌಲ್ಯಕ್ಕೆ ಸಮನಾದ ಬ್ಯಾಂಕ್ ಖಾತರಿಯನ್ನು ಹಾಜರುಪಡಿಸಿದ ನಂತರ ಮತ್ತು ಜಪ್ತಿಯನ್ನು ಮಾಡಲಾಗಿದ್ದ ಕಾರಣದ ಆಧಾರದ ಮೇಲೆ ಅಪರಾಧವನ್ನು ವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ದಂಡಾಧಿಕಾರಿಗಳ ಮುಂದೆ ಅಗತ್ಯಪಡಿಸಿದಂತೆ ಮತ್ತು ಹಾಗೆ ಅಗತ್ಯಪಡಿಸಿದಾಗಲೆಲ್ಲಾ ಹಾಗೆ ಬಿಡುಗಡೆ ಮಾಡಿದ ಸ್ವತ್ತಿನ ಹಾಜರಾತಿ ಬಾಂಡ್‌ನ್ನು ಅದರ ಮಾಲೀಕನು ಬ್ಯಾಂಕ್ ಖಾತರಿಯನ್ನು ಬರೆದುಕೊಡುವುದರ ಆಧಾರದ ಮೇಲೆ ಜಾನುವಾರನ್ನು ಹೊರತುಪಡಿಸಿ ವಾಹನವನ್ನು ಒಳಗೊಂಡು ಸಾಮಗ್ರಿಗಳನ್ನು ಬಿಡುಗಡೆ ಮಾಡಬಹುದು ಮತ್ತು 19ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಸಂಸ್ಥೆಗೆ ಜಾನುವಾರನ್ನು ಹಸ್ತಾಂತರಿಸಲು ಆದೇಶಿಸಬಹುದು.

(5) ಅಪರಾಧ ಎಸಗಲು ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಆವರಣಗಳಿಗೆ ಮತ್ತು ಸಾಮಗ್ರಿಗಳಿಗೆ ಸಂಬಂಧಿಸಿದ ಅಂಥ ಜಪ್ತಿ ದಾಖಲೆಗಳ ವರದಿಯನ್ನು ಸ್ವೀಕರಿಸಿದ ನಂತರ, ಉಪ-ವಿಭಾಗೀಯ ದಂಡಾಧಿಕಾರಿಗಳು, ಅಪರಾಧವನ್ನು ಈ ಅಧಿನಿಯಮದ ಅಡಿಯಲ್ಲಿ ಎಸಗಲಾಗಿದೆ ಅಥವಾ ಎಸಗಬೇಕೆಂದು ಉದ್ದೇಶಲಾಗಿತ್ತು ಎಂಬುದನ್ನು ಸ್ವತಃ ಮನವರಿಕೆ ಮಾಡಿಕೊಂಡು, ಅಂಥ ಅಪರಾಧಕ್ಕೆ ಅಭಿಯೋಜನೆ ಹೂಡಬೇಕೇ ಅಥವಾ ಅದನ್ನು ಮುಟ್ಟುಗೋಲು ಹಾಕಿಕೊಂಡು ಅಂಥ ಆದೇಶವನ್ನು ಹೊರಡಿಸಬೇಕೆ ಎಂಬುದನ್ನು ನಿರ್ಧರಿಸತಕ್ಕದ್ದು.

ಪರಂತು, ಅಂಥ ಯಾವುದೇ ಆದೇಶವನ್ನು, ಅಪರಾಧವನ್ನು ಎಸಗುವ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳುವ ಅವಕಾಶವನ್ನು ನೀಡದೆ ಮಾಡತಕ್ಕದ್ದಲ್ಲ.

(6) (5)ನೇ ಉಪ-ಪ್ರಕರಣದ ಅಡಿಯಲ್ಲಿ ಮುಟ್ಟುಗೋಲಿಗೆ ಆದೇಶವನ್ನು ಮಾಡುವಾಗ, ಉಪ-ವಿಭಾಗೀಯ ದಂಡಾಧಿಕಾರಿಗಳು, ಮುಟ್ಟುಗೋಲಿನ ಆದೇಶವನ್ನು ಯಾವ ಅಂಥ ಸ್ವತ್ತುಗಳ ಸಂಬಂಧದಲ್ಲಿ ಹೊರಡಿಸಲಾಗಿದೆಯೋ ಆ ಸ್ವತ್ತುಗಳು ಅವರ ಅಭಿಪ್ರಾಯದಲ್ಲಿ ಸಂರಕ್ಷಿಸಲಾಗದವುಗಳಾಗಿದ್ದಲ್ಲಿ ಅಥವಾ ಮಾನವ ಬಳಕೆ ಯೋಗ್ಯವಾಗಿಲ್ಲದೇ ಇದ್ದಲ್ಲಿ, ಅವುಗಳನ್ನು ನಾಶಪಡಿಸಲು ಸಹ ಆದೇಶಿಸಬಹುದಾಗಿದೆ.

(7)ಉಪ-ವಿಭಾಗೀಯ ದಂಡಾಧಿಕಾರಿಗಳ ಅಭಿಪ್ರಾಯದಂತೆ, ಹಾಗೆ ಮಾಡುವುದು ಸಾರ್ವಜನಿಕ ಹಿತಾಸಕ್ತಿಯಲ್ಲಿ ವಿಹಿತವೆಂದು ಅವರಿಗೆ ಅನ್ನಿಸಿದರೆ, ಮುಟ್ಟುಗೋಲು ಹಾಕಿಕೊಂಡ ಆವರಣಗಳನ್ನು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಬಹುದು.

(8) ಮೇಲೆ ಹೇಳಲಾದಂತೆ, ಮುಟ್ಟುಗೋಲು ಹಾಕಿಕೊಂಡ ಯಾವುದೇ ಸ್ವತ್ತನ್ನು ಮಾರಾಟ ಮಾಡಿದಾಗ, ಅದರ ಉತ್ಪತ್ತಿಗಳನ್ನು, ಅಂಥ ಹರಾಜಿನ ಸಂಬಂಧದಲ್ಲಿನ ವೆಚ್ಚಗಳನ್ನು ಅಥವಾ ಅದಕ್ಕೆ ಸಂಬಂಧಿಸಿದ ಇತರ ಪ್ರಾಸಂಗಿಕ ವೆಚ್ಚಗಳನ್ನು ಕಡಿತ ಮಾಡಿಕೊಂಡ ನಂತರ, (5)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಮುಟ್ಟುಗೋಲಿನ ಆದೇಶವನ್ನು ಮೇಲ್ಮನವಿ ನ್ಯಾಯಾಲಯವು ರದ್ದುಗೊಳಿಸಿದರೆ ಅಥವಾ ಶೂನ್ಯಗೊಳಿಸಿದರೆ,

ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅದರ ಮಾಲೀಕನಿಗೆ ಅಥವಾ ಅದನ್ನು ಯಾರಿಂದ ಜಪ್ತಿ ಮಾಡಲಾಗಿತ್ತೋ ಆ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

(9) ಮುಟ್ಟುಗೋಲು ಹಾಕಿಕೊಂಡ ಜಾನುವಾರನ್ನು 19ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಿದ ಸಂಸ್ಥೆಗೆ ಹಸ್ತಾಂತರಿಸತಕ್ಕದ್ದು ಮತ್ತು ಯಾವುವೇ ಸಂದರ್ಭಗಳಲ್ಲೂ, ಆರೋಪಿಗೆ ಹಸ್ತಾಂತರಿಸತಕ್ಕದ್ದಲ್ಲ ಅಥವಾ ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡತಕ್ಕದ್ದಲ್ಲ.

9. ವಿಶೇಷ ನ್ಯಾಯಾಲಯದ ರಚನೆ.- ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ವಿವಾದಗಳ ತ್ವರಿತ ವಿಲೆಯ ಉದ್ದೇಶಕ್ಕಾಗಿ, ಅಧಿಸೂಚನೆಯ ಮೂಲಕ ಒಂದು ಅಥವಾ ಹೆಚ್ಚು ಜಿಲ್ಲೆಗಳಿಗಾಗಿ ವಿಶೇಷ ನ್ಯಾಯಾಲಯವಾಗಿ ಯಾವುದೇ ನ್ಯಾಯಾಲಯವನ್ನು ಗೊತ್ತುಪಡಿಸಬಹುದು.

10. ಮೇಲ್ಮನವಿಗಳು.- (1) 8ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ಅಂಥ ಆದೇಶವು ಯಾವ ಸ್ವತ್ತಿನ ಜಪ್ತಿಗೆ ಸಂಬಂಧಿಸಿದೆಯೋ ಆ ಸ್ವತ್ತು ಇರುವ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸತ್ರ ನ್ಯಾಯಾಧೀಶರಿಗೆ ಮೇಲ್ಮನವಿ ಸಲ್ಲಿಸಬಹುದು.

(2) ಸತ್ರ ನ್ಯಾಯಾಧೀಶರು, ಬಾಧಿತ ವ್ಯಕ್ತಿಗಳಿಗೆ ಅಹವಾಲು ಹೇಳಿಕೊಳ್ಳುವ ಸೂಕ್ತ ಅವಕಾಶವನ್ನು ನೀಡಿದ ನಂತರ, ಅವರು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

11. ಕೆಲವು ಮೊಕದ್ದಮೆಗಳಲ್ಲಿ ಅಧಿಕಾರವ್ಯಾಪ್ತಿಯ ನಿಷೇಧ.- ಯಾವುದೇ ಜಾನುವಾರು ಮತ್ತು ಆವರಣಗಳು ಹಾಗೂ ಸಾಮಗ್ರಿಗಳನ್ನು ಅಂಥ ಅಪರಾಧವನ್ನು ಎಸಗಲು ಬಳಸಿದಾಗ ಅಥವಾ ಬಳಸಲು ಉದ್ದೇಶಿಸಿದಾಗ ಮತ್ತು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಬಂಧಿಸಿದಾಗ, 10ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿಯನ್ನು ಆಲಿಸುವ ಉಪ-ವಿಭಾಗೀಯ ದಂಡಾಧಿಕಾರಿಗಳು ಅಥವಾ ಸತ್ರ ನ್ಯಾಯಾಧೀಶರು, ಅಂಥ ಸ್ವತ್ತಿನ ಅಭಿರಕ್ಷೆ, ಸ್ವಾಧೀನ, ರವಾನೆ, ವಿಕ್ರಯ ಅಥವಾ ವಿತರಣೆಗೆ ಸಂಬಂಧಿಸಿದ ಆದೇಶಗಳನ್ನು ಮಾಡಲು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು ಹಾಗೂ ಇತರ ಯಾರೇ ಅಧಿಕಾರಿ ಅಥವಾ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರವು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

12. ದಂಡನೆಗಳು.- (1) 4ನೇ ಪ್ರಕರಣದ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ, ಅಪರಾಧ ನಿರ್ಣೀತನಾದ ಮೇಲೆ ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಜಾನುವಾರಿಗೆ ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ, ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು. ಎರಡನೇ ಅಥವಾ ಮುಂದುವರೆದ ಅಪರಾಧದ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ, ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮುಂದುವರೆದ ಜುಲ್ಮಾನೆಯೊಂದಿಗೆ, ಜೊತೆಗೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು.

(2) 4ನೇ ಪ್ರಕರಣದ ಹೊರತಾದ ಯಾವುದೇ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ, ಅಪರಾಧ ನಿರ್ಣೀತನಾದ ಮೇರೆಗೆ ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಆದರೆ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ, ಐದು ಲಕ್ಷ ರೂಪಾ ಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಅವೆರಡರಿಂದಲು ದಂಡಿತನಾಗತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಯಾವುದೇ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ, ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಆದರೆ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

13. ಅಧಿನಿಯಮದ ಅಡಿಯಲ್ಲಿನ ಅಪರಾಧಗಳು ಸಂಜ್ಞೇಯವಾಗಿರುವುದು.- ಈ ಅಧಿನಿಯಮದ ಅಡಿಯಲ್ಲಿನ ಎಲ್ಲಾ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.

14. ಅಪರಾಧಕ್ಕಾಗಿ ಬಳಸಲಾದ ವಸ್ತುಗಳ ಮುಟ್ಟುಗೋಲು.- ಆಪಾದಿತನು ಅಪರಾಧ ನಿರ್ಣೀತನಾದರೆ, ನ್ಯಾಯಾಲಯವು ವಶಪಡಿಸಿಕೊಂಡ ಜಾನುವಾರು, ವಾಹನ, ಆವರಣಗಳು ಮತ್ತು ಸಾಮಾಗ್ರಿಗಳನ್ನು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಮಾಡತಕ್ಕದ್ದು.

15. ದುಷ್ಪ್ರೇರಣೆ.- ಯಾರೊಬ್ಬರೂ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ದಂಡನೀಯ ಅಪರಾಧಕ್ಕಾಗಿ ದುಷ್ಪ್ರೇರೇಪಿಸಿದರ ಅಥವಾ ಯಾವುದೇ ಅಂಥ ಅಪರಾಧವನ್ನು ಎಸಗಲು ಪ್ರಯತ್ನಿಸಿದರ, ಈ ಅಧಿನಿಯಮದಲ್ಲಿ ಅಂಥ ಅಪರಾಧಕ್ಕಾಗಿ ಉಪಬಂಧಿಸಿದ ದಂಡನೆಯೊಂದಿಗೆ ದಂಡಿತನಾಗತಕ್ಕದ್ದು.

16. ಅಧಿನಿಯಮದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ವ್ಯಕ್ತಿಗಳನ್ನು ಸರ್ಕಾರಿ ನೌಕರರೆಂದು ಭಾವಿಸುವುದು.- ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಎಲ್ಲಾ ವ್ಯಕ್ತಿಗಳನ್ನು, ಭಾರತೀಯ ದಂಡ ಸಂಹಿತೆ, 1860ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸರ್ಕಾರಿ ನೌಕರರೆಂದು ಭಾವಿಸತಕ್ಕದ್ದು.

17. ಸದ್ಭಾವನೆಯಿಂದ ಕಾರ್ಯನಿರ್ವಹಿಸುವ ವ್ಯಕ್ತಿಗಳ ರಕ್ಷಣೆ.- ಈ ಅಧಿನಿಯಮದ ಅಥವಾ ಅದರಡಿ ರಚಿಸಿದ ನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದ ಸಕ್ಷಮ ಪ್ರಾಧಿಕಾರಿಯ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

18. ವಿನಾಯಿತಿಗಳು.- (1) ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಈ ಅಧಿನಿಯಮವು ಈ ಮುಂದಿನ ಸಂದರ್ಭಗಳಿಗೆ ಅನ್ವಯಿಸತಕ್ಕದ್ದಲ್ಲ.-

(ಎ) ರಾಜ್ಯ ಸರ್ಕಾರದಿಂದ ಸ್ಥಾಪಿಸಿದ, ನಡೆಸುತ್ತಿರುವ ಅಥವಾ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಲಸಿಕೆ ಸ್ರಾವ, ರಕ್ತ ಸಾರ ಅಥವಾ ಯಾವುದೇ ಪ್ರಾಯೋಗಿಕ ಅಥವಾ ಸಂಶೋಧನಾ ಉದ್ದೇಶದ ಮೇಲೆ ಯಾವುದೇ ಜಾನುವಾರನ್ನು ಕೊಯ್ದದ್ದು (operate) ಮಾಡಿದರೆ; ಅಥವಾ

(ಬಿ) ಯಾವುದೇ ಜಾನುವಾರು,-

(i) ಸಾರ್ವಜನಿಕ ಆರೋಗ್ಯದ ಹಿತಾಸಕ್ತಿಯಲ್ಲಿ ಜಾನುವಾರು ಹತ್ಯೆ ನಡೆಸಲು ಅಗತ್ಯವಾಗಿರುವುದೆಂದು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಪಶುವೈದ್ಯಾಧಿಕಾರಿಯು ಪ್ರಮಾಣಿಸಿದರೆ;

(ii) ಯಾವುದೇ ರೋಗದಿಂದ ಬಳಲುತ್ತಿದ್ದು, ಇತರ ಜಾನುವಾರುಗಳಿಗೆ ಸಾಂಕ್ರಾಮಿಕ ಮತ್ತು ಮಾರಕವೆಂದು ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಪಶುವೈದ್ಯಾಧಿಕಾರಿಯು ಪ್ರಮಾಣಿಸಿದರೆ;

(ಸಿ) ಯಾವುದೇ ಜಾನುವಾರು ವಾಸಿಯಾಗದ ರೋಗದಿಂದ ಖಾಯಿಲೆಯಲ್ಲಿಯೇ ಅಂತ್ಯವಾಗುವ ಆಧಾರದ ಮೇಲೆ ಜಾನುವಾರು ಹತ್ಯೆ ನಡೆಸುವುದು ಅವಶ್ಯಕವೆಂದು ಪ್ರಮಾಣೀಕರಿಸಿದರೆ,-

(i) ಕೇಂದ್ರ ಸರ್ಕಾರದಲ್ಲಿ ರಕ್ಷಣಾ ಮಂತ್ರಾಲಯಕ್ಕೆ ಸೇರಿರುವ ಜಾನುವಾರಿನ ಸಂದರ್ಭದಲ್ಲಿ ಭಾರತೀಯ ಸೇನೆಯ ಪಶು ವೈದ್ಯಾಧಿಕಾರಿ;

(ii) ಯಾವುದೇ ಇತರ ಜಾನುವಾರಿನ ಸಂದರ್ಭದಲ್ಲಿ, ರಾಜ್ಯ ಸರ್ಕಾರದ ಪಶು ವೈದ್ಯಾಧಿಕಾರಿ ದರ್ಜೆಗೆ ಕಡಿಮೆಯಿಲ್ಲದ ಯಾವೊಬ್ಬ ಅಧಿಕಾ .

(ಡಿ) ಸಕ್ಷಮ ಪ್ರಾಧಿಕಾರಿಯ ಪ್ರಮಾಣೀಕರಣದೊಂದಿಗೆ ಹದಿಮೂರು ವರ್ಷಗಳ ವಯಸ್ಸಿನ ಮೇಲಿರುವ ಎಮ್ಮೆ ಅಥವಾ ಕೋಣ.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಜಾನುವಾರು ಹತ್ಯೆ ಮಾಡಲಾದ ಯಾವುದೇ ಜಾನುವಾರನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಪಶು ವೈದ್ಯಾಧಿಕಾರಿ ದರ್ಜೆಗೆ ಕಡಿಮೆಯಿಲ್ಲದ ಪಶು ವೈದ್ಯಾಧಿಕಾರಿಯ ಮೇಲ್ವಿಚಾರಣೆಯಲ್ಲಿ ವಿಲೇ ಮಾಡತಕ್ಕದ್ದು.

19. ಜಾನುವಾರುಗಳ ಪೋಷಣೆ ಕೈಗೊಳ್ಳಲು ಸಂಸ್ಥೆಗಳ ಸ್ಥಾಪನೆ.- (1) ರಾಜ್ಯ ಸರ್ಕಾರವು ಜಾನುವಾರುಗಳ ಪೋಷಣೆಯನ್ನು ಕೈಗೊಳ್ಳುವುದಕ್ಕಾಗಿ ಅಗತ್ಯವೆಂದು ಭಾವಿಸಬಹುದಾದ ಅಂಥ ಸ್ಥಳಗಳಲ್ಲಿ ಗೋಶಾಲೆಗಳನ್ನು ಒಳಗೊಂಡ ಸಂಸ್ಥೆಗಳನ್ನು ಸ್ಥಾಪಿಸಬಹುದು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು ಅಥವಾ ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ, 1960ರ (1960ರ ಕರ್ನಾಟಕ ಅಧಿನಿಯಮ 17) ಅಥವಾ ಯಾವುದೇ ಕೇಂದ್ರ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಿದ ಸೊಸೈಟಿಗೆ ಅಥವಾ ಯಾವುದೇ ಸಂಸ್ಥೆ ಅಥವಾ ಸಂಘಕ್ಕೆ ಅನುಮತಿಯನ್ನು ನೀಡಬಹುದು.

(2) ರಾಜ್ಯ ಸರ್ಕಾರವು ಅದರಲ್ಲಿ ಜಾನುವಾರು ರಕ್ಷಣೆಗಾಗಿ ಅಂಥ ಸಂಸ್ಥೆಗಳ ಕ್ರಮಬದ್ಧ ನಿರ್ವಹಣೆಗಾಗಿ ಮತ್ತು ಅದರಲ್ಲಿ ಸೇರಿಸಬಹುದಾದ ಆಕಳುಗಳು ಅಥವಾ ಇತರ ಜಾನುವಾರು ವರ್ಗದ ಅಥವಾ ತಳಿಗಾಗಿ ಬೆಂಬಲವನ್ನು ಒದಗಿಸಲು ನಿಯಮಗಳ ಮೂಲಕ ಉಪಬಂಧ ಕಲ್ಪಿಸಬಹುದು.

(3) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟು ಸ್ಥಳೀಯ ಪ್ರಾಧಿಕಾರ, ಸೊಸೈಟಿ ಅಥವಾ ವ್ಯಕ್ತಿಗಳ ನಿಕಾಯ ಅಥವಾ ಸಂಘವು (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಅಂಥ ಸಂಸ್ಥೆಯ ನಿರ್ವಹಣೆಗಾಗಿ ನಿಯಮಿಸಬಹುದಾದ ಅಂಥ ಶುಲ್ಕಗಳನ್ನು ವಿಧಿಸಬಹುದು.

20. ನಿಯಮಗಳ ರಚನಾಧಿಕಾರ.- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಮತ್ತು ಪೂರ್ವಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮುಂದಿನ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದ ಅಂಥ ನಿಯಮಗಳನ್ನು ಈ ಮುಂದಿನವುಗಳಿಗಾಗಿ ರಚಿಸಬಹುದು.-

(ಎ) ಈ ಅಧಿನಿಯಮದಲ್ಲಿ ಉಪಬಂಧಿಸಿದವುಗಳ ಜೊತೆಯಲ್ಲಿ ಸಕ್ಷಮ ಪ್ರಾಧಿಕಾರಿಯ ಅಧಿಕಾರಗಳು ಮತ್ತು ಕರ್ತವ್ಯಗಳು;

(ಬಿ) 6ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಜಾನುವಾರು ಸಾಗಾಣಿಕೆಗಾಗಿನ ಪರವಾನಗಿಗಳ ನಮೂನೆ;

(ಸಿ) 18ನೇ ಪ್ರಕರಣದ ಅಡಿಯಲ್ಲಿನ ಯಾವುದೇ ಜಾನುವಾರುಗಳಿಗೆ ಈ ಅಧಿನಿಯಮಕ್ಕೆ ಒಳಪಟ್ಟ ಷರತ್ತುಗಳು ಅನ್ವಯಿಸತಕ್ಕದ್ದಲ್ಲ; ಮತ್ತು

(ಡಿ) ನಿಯಮಿಸಬಹುದಾದ ಅಥವಾ ಬೇಕಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಅಥವಾ ಹೊರಡಿಸಿದ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಅಥವಾ ಅಧಿಸೂಚನೆಯನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೂ ಬಾಧಕವಾಗತಕ್ಕದ್ದಲ್ಲ.

21. ತೊಂದರೆಗಳನ್ನು ನಿವಾರಿಸಲು ಅಧಿಕಾರ.- ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಅಂಥ ಯಾವ ಆದೇಶವನ್ನೂ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಪೂರ್ಣಗೊಂಡ ತರುವಾಯ ಮಾಡತಕ್ಕದ್ದಲ್ಲ.

22. ನಿರಸನ ಮತ್ತು ಉಳಿಸುವಿಕೆಗಳು.- ಕರ್ನಾಟಕ ಗೋಹತ್ಯೆ ಪ್ರತಿಬಂಧಕ ಮತ್ತು ಜಾನುವಾರು ಸಂರಕ್ಷಣೆ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 35) ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ ಅಧಿನಿಯಮ III) 6ನೇ ಪ್ರಕರಣದ ಉಪಬಂಧಗಳು ಸದರಿ ಅಧಿನಿಯಮಿತಿಯ ನಿರಸನಕ್ಕೆ ಸಂಬಂಧಿಸಿದಂತೆ

ಅನ್ವಯವಾಗತಕ್ಕದ್ದು, ಹಾಗೂ ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಈ ಅಧಿನಿಯಮದ ಮೂಲಕ ಸದರಿ ಅಧಿನಿಯಮಿತಿಯು ನಿರಸನಗೊಂಡು ಮತ್ತು ಪುನರ್ ಅಧಿನಿಯಮಿತಿಗೊಂಡಲ್ಲಿ, ಅನ್ವಯವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ದ್ವಾರಕನಾಥ್ ಬಾಬು)
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

DEPARTMENT OF PARLIAMENTARY AFFAIRS AND LEGISLATION SECRETARIAT

NOTIFICATION

NO. DPAL 86 SHASANA 2020, BENGALURU, DATED: 15.02.2021

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2020 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 01) ನ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

KARNATAKA ACT NO. 01 OF 2021

(First Published in the Karnataka Gazette Extra-ordinary on the 15th day of February, 2021)

THE KARNATAKA PREVENTION OF SLAUGHTER AND PRESERVATION OF CATTLE ACT, 2020

(Received the assent of the Governor on the 12th day of February, 2021)

An Act to provide for a comprehensive legislation for the prevention of slaughter and preservation of cattle in the State of Karnataka.

Whereas it is expedient to provide a comprehensive legislation for the prevention of slaughter and preservation of cattle in the State of Karnataka;

Be it enacted by the Karnataka State Legislature in the seventy first year of the Republic of India, as follows:-

1. Short title and commencement.- (1) This Act may be called the Karnataka Prevention of Slaughter and Preservation of Cattle Act, 2020.

(2) It shall come into force on such date as the State Government may, by notification, appoint.

2. Definitions.- In this Act, unless the context otherwise requires,-

(1) "Beef" means flesh of the cattle in any form;

(2) "Cattle" means cow, calf of a cow and bull, bullock of all ages and he or she buffalo below the age of thirteen years;

(3) "Competent authority" means the competent authority appointed under section 3;

(4) "Gau Shala" means a shelter established for the protection and preservation of cattle registered as such with the department of Animal Husbandry and Fisheries under the State or Central Act;

(5) "Notification" means a notification published in the official Gazette;

(6) "Premises" means and includes any premises, vessel or vehicle;

(7) "Prescribed" means prescribed by rules made under this Act; and

(8) "Slaughter" means killing by any method whatsoever and includes maiming and infliction of physical injury which in the ordinary course will cause death.

3. Appointment of competent authority.- The State Government may, by notification, appoint the Tahasildar of a Revenue Taluk or an officer of the Department of Animal Husbandry and Fisheries not below the rank of Veterinary Officer as the Competent authority under this Act for such local area as may be specified in such notification.

4. Prohibition of slaughter of cattle.- Notwithstanding anything contained in any law, custom, or usage to the contrary, no person shall slaughter or cause to be slaughtered, or offer or cause to be offered for slaughter or otherwise intentionally kill or offer or cause to be offered for killing any cattle.

5. Restriction on transport of cattle.- No person shall transport or offer for transport or cause to be transported by whatever means any cattle from any place within the State to any other place within the State for slaughter:

Provided that, the transport of any cattle, in the manner prescribed by the State Government or Central Government, for bona-fide agricultural or animal husbandry purpose shall not be construed as an offence under this section.

6. Restriction on transport of cattle outside the State.- (1) No person shall transport or offer to transport or cause to be transported by whatever means cattle from any place within the State to outside the State for the purpose of slaughter:

Provided that, the Competent Authority may issue permit for transport of cattle for bona-fide agricultural or animal husbandry purposes:

Provided further that, the cattle shall be transported in the manner prescribed by the Central Government by rules governing the transport of cattle under the Prevention of Cruelty to Animals Act, 1960 (Central Act 59 of 1960).

(2) The permit issued under sub-section (1) shall be in such form and in such manner, and subject to payment of such fee as may be prescribed.

7. Prohibition of sale, purchase or disposal of cattle for slaughter.- No person shall purchase, sell or otherwise dispose of or offer to purchase, sell or otherwise dispose of or cause to be purchased, sold or otherwise disposed of, cattle for slaughter or knowing or having reason to believe that such cattle shall be slaughtered.

8. Power of search and seizure.- (1) Where a Police Officer not below the rank of Sub-Inspector or a Competent Authority has reason to believe that an offence under this Act has been committed has power to inspect and seize such cattle and premises and materials used or intended to be used for the commission of such offence.

(2) Every person in occupation of any such premises shall allow the competent authority or an Officer not below the rank of Sub-Inspector such access to the premises as may be necessary for the aforesaid purpose and shall answer to the best of his knowledge and belief any questions put to him by the police Officer not below the rank of Sub-Inspector or the competent authority.

(3) After the seizure under sub-section (1), he shall report such seizure, without unreasonable delay before the Sub-Divisional Magistrate for confiscation.

(4) On receipt of the report, records relating to premises and materials used or intended to be used in the commission of the offence, the Sub-Divisional Magistrate may on his being satisfied that an offence has been committed or intended to be committed under this Act, may release the materials including vehicle except cattle on production of a Bank guarantee equal to the value as estimated by him pending disposal of the criminal proceedings instituted in respect of the alleged offence and on the execution of Bank guarantee by the owner thereof of a bond for the production of the property so released as and when so required before the magistrate having jurisdiction to try the offence on account of which the seizure had been made and order for handing over the cattle to an institution established under section 19.

(5) On receipt of report of such seizure records relating to premises and materials used or intended to be used in the commission of the offence, the Sub-Divisional Magistrate may on his being satisfied that an offence has been committed or intended to be committed under this Act, whether a prosecution is instituted for such offence or not pass such orders confiscating the same:

Provided that, no such order shall be made without giving an opportunity of being heard to the person who committed the offence.

(6) While making an order for confiscation under sub-section (5), the Sub-Divisional Magistrate may also order that such of the properties to which the order

of confiscation relates which in his opinion cannot be preserved or are not fit for human consumption be destroyed.

(7) If the Sub-Divisional Magistrate in his opinion feels that it is expedient in the public interest so to do, may sell the confiscated premises in public auction.

(8) When any confiscated property is sold as aforesaid, the proceeds thereof, after deduction of the expenses of any such auction or other incidental expenses, relating thereto, shall, where the order of confiscation is made under sub-section (5) is set aside or annulled by the Appellate court be paid to the owner thereof or to the person from whom it was seized as may be specified in such order.

(9) The confiscated cattle shall be handed over to an institution established under section 19 and shall not in any circumstances be handed over to the accused or sold in public auction.

9. Constitution of Special Court.- The Government may, for the purpose of speedy disposal of disputes under this Act by notification, designate any Court as the Special Court for one or more districts.

10. Appeals.- (1) Any person aggrieved by any order passed under section 8 may, within thirty days from the date of receipt of such order appeal to the Sessions Judge having jurisdiction over the area in which the property to which such order relates has been seized.

(2) The Sessions judge may after giving the persons affected a reasonable opportunity of being heard, pass such order as it deems fit.

11. Bar of jurisdiction in certain cases.- Whenever any cattle and premises and materials used or intended to be used for the commission of such offence and detained under the provisions of this Act, the Sub-Divisional Magistrate or the Sessions Judge hearing an appeal under section 10 shall have and any other officer or court, tribunal or authority shall not have jurisdiction to make orders with regard to the custody, possession, delivery, disposal or distribution of such property.

12. Penalties.- (1) Whoever contravenes the provisions of section 4, shall on conviction, be punished with imprisonment which shall not be less than three years but which may extend to seven years or with a fine which shall not be less than fifty thousand rupees per cattle but which may extend to five lakh rupees or with both. In the case of second and subsequent offence with a further fine which shall not be less than one lakh rupees but which may extend to ten lakh rupees along with imprisonment which may extend to seven years.

(2) Whoever contravenes any of the provisions other than section 4, shall on conviction, be punished with imprisonment which shall not be less than three years but which may extend to five years or with fine which shall not be less than fifty thousand rupees but which may extend to five lakh rupees or with both.

(3) Whoever contravenes any of the provisions of the rules made under this Act shall on conviction, be punished with imprisonment which shall not be less than three years but which may extend to five years and with fine which may extend to fifty thousand.

13. Offences under the Act to be cognizable.- (1) All offences under this Act, shall be cognizable.

14. Forfeiture of materials used for offence.- If accused is convicted, on conviction Court shall forfeit the confiscated cattle, vehicle, premises and materials to the State Government.

15. Abetment.- Whoever abets any offence punishable under this Act or attempts to commit any such offence, shall be punished with the punishment provided in this Act for such an offence.

16. Persons exercising powers under the Act deemed to be public servants.- All persons exercising powers under this Act shall be deemed to be public servants within the meaning of section 21 of the Indian Penal Code, 1860.

17. Protection of persons acting in good faith.- No suit, prosecution or other legal proceedings shall be instituted against the competent authority or any person exercising powers under this Act for anything which is in good faith done or intended to be done under this Act or the rules made thereunder.

18. Exemptions.- (1) Subject to such conditions as may be prescribed, this Act shall not apply to,-

(a) any cattle operated upon for vaccine lymph, serum or for any experimental or research purpose at an institution established, conducted or recognised by the State Government; or

(b) any cattle,-

(i) slaughter of which is certified by a Veterinary Officer authorised by the State Government, to be necessary in the interest of the public health;

(ii) which is suffering from any disease which is certified by a Veterinary Officer authorised by the State Government as being contagious and dangerous to other cattle;

(c) any cattle, slaughter of which is certified to be necessary on the ground that it is suffering from an incurable disease as terminally ill,-

(i) in the case of a cattle belonging to the Central Government in the Ministry of Defence, by a Veterinary Officer of the Indian Army;

(ii) in the case of any other cattle, by any officer not below the rank of Veterinary Officer of the State Government.

(d) Buffalo above the age of thirteen years with certification of the competent authority.

(2) Any cattle slaughtered under sub-section (1), shall be disposed of under the supervision of the veterinary officer not below the rank of Veterinary Officer, the Department of Animal Husbandry and Fisheries in such manner as may be prescribed.

19. Establishment of institutions for taking care of cattle.- (1) The State Government may establish, or direct any local authority or permit society registered under the Karnataka Societies Registration Act, 1960 (Karnataka Act 17 of 1960), or any Central Act or any association or organization to establish an institution including Gau Shalas at such places as may be deemed necessary for taking care of the cattle to be sent thereto.

(2) The State Government may provide by rules for the proper management of such institutions for the care of cattle therein and provide support for the class or variety of cows or other cattle that may be admitted herein.

(3) The State Government or subject to the previous sanction of the State Government, the local authority, society or body of persons or association establishing an institution under sub-section (1), may levy such fees as may be prescribed for the maintenance of such institution.

20. Power to make rules.- (1) The State Government may, by notification, after previous publication, make rules for carrying out the purposes of this Act.

(2) In particular and without prejudice to the generality of the foregoing power, such rules may provide for,-

(a) the powers and duties of competent authority, in addition to those provided in this Act;

(b) the form of permits for transportation of cattle under sub-section (2) of section 6;

(c) the conditions subject to which this Act shall not apply to any cattle under section 18; and

(d) any other matter which is to be or may be prescribed.

(3) Every rule made under this section shall be laid as soon as may be after it is made before each House of the State Legislature while it is in session for a total period of thirty days which may be comprised in one session or in two or more successive sessions, and if before the expiry of the session in which it is so laid or the session immediately following, both Houses agree in making any modification in the rule or both Houses agree that the rule should not be made, the rule shall

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

thereafter have effect only in such modified form or be of no effect, as the case may be; so however, that any such modification or annulment shall be without prejudice to the validity of anything previously done under that rule.

21. Power to remove difficulty.- If any difficulty arises in giving effect to the provisions of this Act, the State Government may by order published in the official Gazette make provisions not inconsistent with the provisions of this Act as it appear to be necessary or expedient for removing the difficulty:

Provided that, no such order shall be made after the expiry of a period of two years from the date of commencement of this Act.

22. Repeal and savings.- The Karnataka Prevention of Cow Slaughter and Cattle Preservation Act, 1964 (Karnataka Act 35 of 1964) is hereby repealed:

Provided that, the provisions of section 6 of the Karnataka General Clauses Act, 1899 (Karnataka Act III of 1899) shall be applicable in respect of the repeal of the said enactment and sections 8 and 24 of the said Act shall be applicable as if the said enactment had been repealed and re-enacted by this Act.

The above translation of ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2020 (2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 01) be published in the Official Gazette under clause (3) of Article 348 of the Constitution of India.

VAJUBHAI VALA
GOVERNOR OF KARNATAKA

By order and in the name of
the Governor of Karnataka

(K. DWARAKANATH BABU)
Secretary to Government
Department of Parliamentary Affairs
and Legislation.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) ಇವರು ಸದನದಲ್ಲಿ ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1177 ಕ್ಕೆ ಅನುಬಂಧ-2

ಕ್ರಸಂ	ಜಿಲ್ಲೆಯ ಹೆಸರು	ಪ್ರಕರಣಗಳ ಸಂಖ್ಯೆ
1	ದಕ್ಷಿಣ ಕನ್ನಡ	40
2	ಚಿಕ್ಕಮಗಳೂರು	32
3	ಬೆಂಗಳೂರು ನಗರ	12
4	ಹಾಸನ	43
5	ವಿಜಯಪುರ	0
6	ಚಿಕ್ಕಬಳ್ಳಾಪುರ	5
7	ಬೆಂಗಳೂರು ಗ್ರಾಮಾಂತರ	8
8	ರಾಮನಗರ	0
9	ತುಮಕೂರು	0
10	ಕೋಲಾರ	65
11	ಚಿತ್ರದುರ್ಗ	12
12	ದಾವಣಗೆರೆ	0
13	ಶಿವಮೊಗ್ಗ	6
14	ಮೈಸೂರು	1
15	ಮಂಡ್ಯ	14
16	ಚಾಮರಾಜನಗರ	8
17	ಉಡುಪಿ	17
18	ಕೊಡಗು	18
19	ಬೆಳಗಾವಿ	6
20	ಉತ್ತರಕನ್ನಡ (ಕಾರವಾರ)	2020 –54 ಪ್ರಕರಣಗಳು ದಾಖಲಾಗಿವೆ 2021–41 ಪ್ರಕರಣಗಳು ದಾಖಲಾಗಿವೆ
21	ಹಾವೇರಿ	6
22	ಧಾರವಾಡ	0
23	ರಾಯಚೂರು	0
24	ಗದಗ	1
25	ಬಾಗಲಕೋಟೆ	1
26	ಕಲಬುರ್ಗಿ	16
27	ಬಳ್ಳಾರಿ	3
28	ಕೊಪ್ಪಳ	4
29	ಯಾದಗಿರಿ	0
30	ಬೀದರ	0
	ಒಟ್ಟು	413